## ಕಣ್ಮರೆಯಾಗಿರುವ ಅಡಿಕೆ ಕತ್ತರಿ

ಮಲೆನಾಡು ಸೇರಿದಂತೆ ರಾಜ್ಯದೆಲ್ಲೆಡೆ ತಿಂಡಿ, ಊಟದ ನಂತರ ತಾಂಬೂಲ ಮೆಲ್ಲುವುದು ಸ್ವಾಭಾವಿಕ. ಹರಿವಾಣದಲ್ಲಿ ಚಿಗುರೆಲೆ, ಗೋಟಡಿಕೆ, ಕಪ್ಪೆ ಚಿಪ್ಪಿನ ಸುಣ್ಣ, ಕೊಬ್ಬರಿ ಚೂರು ಜೊತೆಗೆ ಅಡಿಕೆ ಕತ್ತರಿ ಇಷ್ಟನ್ನು ಇಟ್ಟುಕೊಂಡು ಜಗುಲಿಯ ಮೇಲೆ ಕುಳಿತು ಎಲೆಯಡಿಕೆ ತಿನ್ನಲು ಶುರು ಮಾಡಿದರೆ, ಯಾರ್‍ಯಾರು, ಎಷ್ಟೆಷ್ಟು ತಿನ್ತಾರಂತ ಲೆಕ್ಕಕ್ಕೇ ಸಿಗ್ತಿರ್ಲಿಲ್ಲ ಹಿಂದೆ. ಗೋಟಡಿಕೆ ಕತ್ತರಿಸಲು ವಿವಿಧ ವಿನ್ಯಾಸದ ಲೋಹದ ಕತ್ತರಿಗಳು ಎಲ್ಲರ ಮನೆಯಲ್ಲೂ ಇರುತ್ತಿದ್ದವು. ಈಗ ಅವು ಕಣ್ಮರೆಯಾಗಿವೆ. ಆದರೆ, ರಾಜಲಕ್ಷ್ಮಿಯವರ ಮನೆಯಲ್ಲಿ ಇಂತಹ ವಿಶೇಷ ವಸ್ತುಗಳನ್ನು ನಾವೀಗಲೂ ಕಾಣಬಹುದು.

**■ ಸುಮಾ, ಕಳಸಾಪುರ**





## ಕಾಷ್ಠ ಶಿಲ್ಪದಲ್ಲಿ ಅರಳಿದ ಕಲೆ

ಇದು ಕಬ್ಬಿಣದ ಇಸ್ತ್ರಿ ಪೆಟ್ಟಿಗೆ ಎಂದರಿತು ಬೆಂಕಿ ಹಾಕಿದರೆ ಸುಟ್ಟು ಕರಕಲಾಗುತ್ತದೆ. ಏಕೆಂದರೆ ಇದು ಮರದಿಂದ ಮಾಡಿದ ಇಸ್ತ್ರಿ ಪೆಟ್ಟಿಗೆ. ಗ್ರಾಮೀಣಾಭಿವೃದ್ಧಿ ಕರಕುಶಲ ಕಲೆ ಯೋಜನೆಯ  ಮೂಲಕ ವಿಜಯಪುರದಲ್ಲಿ ಹಾಗೂ ಬಾಗಲಕೋಟೆಯಲ್ಲಿ ತರಬೇತಿ ಪಡೆದವರು ಈ ಕಟ್ಟಿಗೆ ಇಸ್ತ್ರಿ ಪೆಟ್ಟಿಗೆಯನ್ನು ರೂಪಿಸಿದ್ದಾರೆ. ಈ ಕಲೆಯು ನೋಡುಗರನ್ನು ಸೂಜಿಗಲ್ಲಿನಂತೆ ಸೆಳೆಯುತ್ತದೆ. ಭಾರತ ವಿಕಾಸ ಸಂಗಮ ವಿಜಯಪುರ ಜಿಲ್ಲೆ ಕಗ್ಗೋಡ ಗ್ರಾಮದಲ್ಲಿ ಏರ್ಪಡಿಸಿದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ಈ ಕಲೆ ಪ್ರಶಂಸೆಗೆ ಪಾತ್ರವಾಯಿತು.

**■ ಪಂಡಿತರಾವ ಪಾಟೀಲ, ಸರಸಂಬಾ**

## ನೆಟ್ಟಗೆ ನಡೆಯುವ ಕೋಳಿ...!

ಇದು ಒಂಥರಾ ವಿಚಿತ್ರವಾದ ಕೋಳಿ ಎಂದರೆ ತಪ್ಪಾಗದು. ತನ್ನ ದೇಹವನ್ನು ನೆಟ್ಟಗೆ ಮಾಡಿಕೊಂಡು ಥೇಟ್ ಮನುಷ್ಯನಂತೆ ಈ ಕೋಳಿ ನಡೆಯುತ್ತದೆ. ಪ್ರಕೃತಿಯಲ್ಲಿ ಚಿತ್ರ ವಿಚಿತ್ರಗಳಿಗೆ, ಕುಹಕ–ಕುತೂಹಲಗಳಿಗೆ ಆಹಾರ ಒಂದೇ ಎರಡೇ. ಫ್ಯಾಷನ್ ಡ್ರೆಸ್‌ಗಳಲ್ಲಿ ಕೋಳಿಗಳು ಸೆಟೆದು ನಿಲ್ಲುವುದನ್ನು ನೋಡಿಯೇ ಇದ್ದೇವೆ. ಕೆದುಂಬಾಡಿ ಗ್ರಾಮದ ಕೋರಂಗ ಸುಧಾಕರ ರೈ ಅವರ ಮನೆಯ ಕೋಳಿ ಇದಾಗಿದ್ದು, ನೆಟ್ಟಗೆ ನಿಂತು ನಡೆದಾಡಲು ಆರಂಭಿಸಿ ಎಲ್ಲರನ್ನು ಅಚ್ಚರಿಗೊಳಿಸಿತು. ಆದರೆ ಆಹಾರ ಸೇವನೆ ಮಾತ್ರ ಈ ಕೋಳಿಗೆ ತ್ರಾಸದಾಯಕವಾಗಿ ಎತ್ತರದಲ್ಲೇ ತಿನ್ನುವಂತೆ ಆಗಿತ್ತು.

**■ ಕುಮಾರ್ ಪೆರ್ನಾಜೆ, ಪೆರ್ನಾಜೆ**

